**<u>ಸಾಕ್ಷಿಗೆ ದಿನಾಂಕ 05-02-2026 ರಂದು -ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀಸವಾಲುಃ 3 ನೇ ಎದುರುದಾರರ ಪರ ಶ್ರೀ ಕೆ ಎಸ್ ವಕೀಲರಿಂದಃ</u>**

1. ಪೊಲೀಸ್ ದಾಖಲೆಗಳ ಪ್ರಕಾರ ಅರ್ಜಿದಾರರು ರಸ್ತೆ ದಾಟುವಾಗ ಅಪಘಾತವಾಗಿದೆ ಎಂದರೆ ಸರಿ. ಸಂಜಯ್ ಗಾಂಧಿ ಆಸ್ಪತ್ರೆಯ ದಾಖಲೆಗಳಲ್ಲಿ ಗಾಯಾಳು ಸುರೇಶ್ ರವರಿಗೆ ದ್ವಿಚಕ್ರ ವಾಹನ ಡಿಕ್ಕಿಪಡಿಸಿದ್ದರಿಂದ ಅಪಘಾತವಾಗಿದೆ ಎಂದು ನಮೂದಾಗಿದೆ ಎಂದರೆ ತಪ್ಪಾಗಿ ನಮೂದಾಗಿದೆ. ದ್ವಿಚಕ್ರ ವಾಹನದ ಸವಾರನು ದ್ವಿಚಕ್ರ ವಾಹನವನ್ನು ಅತೀವೇಗ ಮತ್ತು ಅಜಾಗರೂಕತೆಯಿಂದ ಚಾಲನೇ ಮಾಡಿಕೊಂಡು ಹೋಗಿ ಅರ್ಜಿದಾರನಿಗೆ ಡಿಕ್ಕಿಪಡಿಸಿದ ಪರಿಣಾಮವಾಗಿ ಬಲಭಾಗದಿಂದ ಎಡಭಾಗಕ್ಕೆ ಬೀಳುತ್ತಾರೆ ಎಂದರೆ ಸರಿಯಲ್ಲ. ಹಾಗೆ ಡಿಕ್ಕಿಪಡಿಸಿದ್ದರಿಂದ ಗಂಭೀರ ಸ್ವರೂಪದ ಗಾಯಗಳು ಆಗಿವೆ ಎಂದರೆ ಸರಿಯಲ್ಲ.

2. ಮೂರನೇ ಎದರುದಾರರ ವಾಹನ ಓಡಾಟಕ್ಕೆ ಅರ್ಜಿದಾರನು ಮತ್ತು ದ್ವಿಚಕ್ರ ವಾಹನದ ಸವಾರನು ಅಡ್ಡಿಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಮೂರನೇ ಎದುರುದಾರರ ವಾಹನದ ಚಾಲಕನ ಯಾವುದೇ ತಪ್ಪು ಇಲ್ಲ ಎಂದರೆ ಸರಿಯಲ್ಲ. ಈ ಸಂಪೂರ್ಣ ಅಪಘಾತಕ್ಕೆ ಅರ್ಜಿದಾರ ಮತ್ತು ದ್ವಿಚಕ್ರ ವಾಹನದ ಸವಾರ ಇಬ್ಬರೇ ನೇರ ಹೊಣೆಗಾರರು ಎಂದರೆ ಸರಿಯಲ್ಲ.

ಪಾ**ಟೀ ಸವಾಲುಃ ಎರಡನೇ ಎದುರುದಾರರು ಹಾಜರಿದ್ದು, ಆದರೆ ಅವರ ಪರ ವಕೀಲರು ಗೈರುಹಾಜರಿರುವುದರಿಂದ** ಪಾ**ಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**
ಪಾ**ಟೀ ಸವಾಲುಃ 4 ಮತ್ತು 5 ನೇ ಎದುರುದಾರರು ಏಕ-ಪಕ್ಷೀಯ. ಆದ್ದರಿಂದ** ಪಾ**ಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**
**ಮರು-ವಿಚಾರಣೇಃಇಲ್ಲ.**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)**

**(ಓ. ಹೇ. ಕೇ. ಸ.ಇ)**

**3ನೇ ಹೆಚ್ಚುವರಿ ಲಘು ವ್ಯವಹಾರಗಳ**
**ನ್ಯಾಯಾಧೀಶರು, ಬೆಂಗಳೂರು.**